ಹಾಲು ಒಕ್ಕೂಟದಲ್ಲಿ ಅವ್ಯವಹಾರಗಳ ಬಗ್ಗೆ ಕೋರ್ಟ್ ಆದೇಶ

1391 (1705) ಶ್ರೀ ಕೆ.ಹೆಚ್.ಹನುಮೇಗೌಡ (ಹಾಸನ): ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಹಾಸನ ಹಾಲು ಒಕ್ಕೂಟದಲ್ಲಿ ನಡೆದಿರುವ ಅಕ್ರಮ ಹಗರಣಗಳ ಬಗ್ಗೆ ಕಾಯ್ದೆ 64ರ ರೀತ್ಯಾ ನಡೆಸಲಾದ ವಿಚಾರಣೆಯಂತೆ ಕ್ರಮ ಜರುಗಿಸುವಂತೆ ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆಯನ್ನು ಹೈಕೋರ್ಟ್‌ನಲ್ಲಿ ದಾಖಲಿಸಿರುವುದು ನಿಜವಲ್ಲವೇ?

2) ಈ ಮೊಕದ್ದಮೆಯ ಅನುಸಾರ ಹೈಕೋರ್ಟ್ ಯಾವ ಕ್ರಮ ತೆಗೆದಕೊಳ್ಳುವಂತೆ ಆದೇಶಿಸಿದೆ, ವಿವರ ನೀಡುವುದು.

3) ಹೈಕೋರ್ಟ್‌ನ ಆದೇಶದಂತೆ ಯಾವ ಕ್ರಮ ತೆಗೆದುಕೊಳ್ಳಲಾಗಿದೆ, ವಿವರ ನೀಡುವುದು.

ಶ್ರೀ ಹೆಚ್.ವಿಶ್ವನಾಥ್ (ಸಹಕಾರ ಸಚಿವರು):

1) ಹೌದು ನಿಜ

2) ಸರ್ಕಾರವು ವಿಚಾರಣೆಯನ್ನು ಮುಂದುವರೆಸಿ, ಕಾನೂನು ರೀತ್ಯಾ ಸೂಕ್ತ ಕ್ರಮ ಕೈಗೊಳ್ಳುವ ಆದೇಶಿಸುತ್ತಾ, ಸಾರ್ವಜನಿಕ ಹಿತಾಸಕ್ತಿ ಅರ್ಜಿ ವಜಾ ಮಾಡಿರುತ್ತದೆ.

3) ಕಲಂ 64ರ ವಿಚಾರಣಾ ವರದಿಯನ್ನು ಆದರಿಸಿ ಇಲಾಖೆಯು ಕೆಳಕಂಡ ಕ್ರಮ ಕೈಗೊಂಡಿರುತ್ತದೆ.

ಅ) ವಿಚಾರಣಾ ವರದಿಯಲ್ಲಿ ಕಂಡುಬಂದಿರುವ ನ್ಯೂನತೆಗಳು ಹಾಗೂ ಲೋಪದೋಪಗಳನ್ನು ಸರಿಪಡಿಸಲು ಮತ್ತು ಇವುಗಳಿಗೆ ಕಾರಣರಾದವರ ಮೇಲೆ ಸೂಕ್ತ ಕ್ರಮ ಕೈಗೊಳ್ಳಲು ಒಕ್ಕೂಟಕ್ಕೆ ನಿರ್ದೇಶನ ನೀಡಿ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಕಲಂ 68 ರಡಿಯಲ್ಲಿ ಆದೇಶಿಸಲಾಗಿದೆ.

ಆ) ಈ ಆದೇಶವನ್ನು ಪ್ರಶ್ನಿಸಿ ಕಲಂ 106 ರಡಿಯಲ್ಲಿ ದಾಖಲಿಸಿದ ಮೇಲ್ಮನವಿ ಅರ್ಜಿಯನ್ನು ಸಹಕಾರ ಸಂಘಗಳು ನಿಬಂಧಕರು ವಜಾ ಮಾಡಿ, ಕಲಂ 68 ರಡಿ ನೀಡಿದ ಆದೇಶ, ಕಾನೂನುಬದ್ಧ ಆದೇಶವೆಂದು ಪರಿಗಣಿಸಿ, ಈ ವಿಚಾರದಲ್ಲಿ ನಿರ್ದಿಷ್ಟವಾದ ಕ್ರಮ ಕೈಗೊಳ್ಳಲು ಒಕ್ಕೂಟಕ್ಕೆ ನಿರ್ದೇಶಿಸಲಾಗಿದೆ.

ಇ) ಒಕ್ಕೂಟದ ಆಡಳಿತ ಮಂಡಳಿ ಸದಸ್ಯರಾಗಿ ಮುದುವರಿಯಲು ಆಯ್ಕೆಯಾಗಲು ಅಥವಾ ನೇಮಕವಾಗಲು ಅನರ್ಹಗೊಳಿಸಲು ಒಕ್ಕೂಟದ ಅಧ್ಯಕ್ಷರಿಗೆ ಕಲಂ 29ಸಿ ರಡಿ ಕಾರಣ ಕೇಳಿ ನೋಟೀಸು ನೀಡಲಾಗಿದೆ.

ಈ) ಈ ವಿಚಾರದಲ್ಲಿ ಒಕ್ಕೂಟಕ್ಕೆ ಉಂಟಾಗಿರುವ ನಷ್ಟಕ್ಕೆ ಕಾರಣರಾದವರ ಮೇಲೆ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಕಲಂ 69 ರನ್ವಯ ಅಧಿಭಾರ ನಡವಳಿಗಳನ್ನು ಕೈಗೊಳ್ಳಲು ಒಕ್ಕೂಟಕ್ಕೆ ತಿಳಿಸಲಾಗಿದೆ.

ಗೌರವ ಉಚ್ಚ ನ್ಯಾಯಾಲಯದಲ್ಲಿ ಸಲ್ಲಿಸಿರುವ ರಿಟ್ ಅರ್ಜಿ ಸಂಖ್ಯೆ 47711:2001, 408:2002, 3863:2002, 4002:2002 ರಲ್ಲಿ ವಿಚಾರಣಾ ವರದಿ ಕಲಂ 68 ರ ಆದೇಶ ಹಾಗೂ ಕಲಂ 106 ರಡಿ ನೀಡಿರುವ ಆದೇಶಗಳಿಗೆ ಗೌರವ ಉಚ್ಚ ನ್ಯಾಯಾಲಯವು ತಡೆಯಾಜ್ಞೆ ನೀಡಿರುವತ್ತದೆ. ಸಾರ್ವಜನಿಕ ಹಿತಾಸಕ್ತಿ

ರಿಟ್-ಅರ್ಜಿಯಲ್ಲಿ ಗೌರವ ಉಚ್ಚ ನ್ಯಾಯಾಲಯವು ನೀಡಿದ ಆದೇಶವನ್ನು ಆಧರಿಸಿ, ಮೇಲ್ಕಂಡ ರಿಟ್ ಅರ್ಜಿಗಳಲ್ಲಿ ಉಚ್ಚ ನ್ಯಾಯಾಲಯವು ನೀಡಿರುವ ತಡೆಯಾಜ್ಞೆಯನ್ನು ತೆರವು ಮಾಡಲು ಕ್ರಮವಿಡಲಾಗಿದೆ.

ಸ್ತ್ರೀಶಕ್ತಿ ಸ್ವಸಹಾಯ ಸಂಘದ ಸದಸ್ಯರಿಗೆ ತರಬೇತಿ

1392 (1773) ಶ್ರೀ ಕೆ.ಹೆಚ್.ಹನುಮೇಗೌಡ (ಹಾಸನ): ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಎಷ್ಟು ಸ್ತ್ರೀಶಕ್ತಿಯ ಸ್ವಸಹಾಯ ಸಂಘಗಳನ್ನು ಪ್ರಾರಂಭಿಸಲಾಗಿದೆ?

ಆ) ಈ ಸ್ವಸಹಾಯ ಸಂಘಗಳಿಗೆ ಸರ್ಕಾರ ಯಾವ ಯಾವ ಸಹಾಯಗಳನ್ನು ನೀಡುತ್ತದೆ.

ಇ) ಈ ಸ್ವಸಹಾಯ ಸಂಘದ ಸದಸ್ಯರುಗಳಿಗೆ ಸರ್ಕಾರ ಯಾವ ಯಾವ ರೀತಿಯ ತರಬೇತಿಗಳನ್ನು ನೀಡಿದೆ. (ವಿವರಗಳನ್ನು ನೀಡುವುದು)

ಈ) ಈ ತರಬೇತಿ ಕೊಡುವುದರಿಂದ ಸರ್ಕಾರಕ್ಕೆ ಎಷ್ಟು ಹಣ ಖರ್ಚಾಗಿದೆ (ವಿವರ ನೀಡುವುದು)?

ಶ್ರೀಮತಿ ಮೋಟಮ್ಮ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು):

ಅ) ರಾಜ್ಯದಲ್ಲಿ ಸ್ತ್ರೀಶಕ್ತಿ ಯೋಜನೆಯಡಿ ಒಟ್ಟು 75660 ಸ್ವಸಹಾಯ ಗುಂಪುಗಳು ರಚನೆಯಾಗಿವೆ.

ಆ) ಸ್ತ್ರೀಶಕ್ತಿ ಯೋಜನೆಯಡಿ ರಚನೆಯಾದ ಗುಂಪುಗಳಿಗೆ ಸರ್ಕಾರವು ಈ ಕೆಳಕಂಡ ಸಹಾಯಗಳನ್ನು ನೀಡುತ್ತದೆ.

ಅ. ಪ್ರತಿ ಗುಂಪಿಗೆ 5000/- ರೂ.ಮೊತ್ತದ ಸುತ್ತುನಿಧಿ.

ಆ. ಪ್ರತಿ ಗಂಪಿಗೆ 500/- ರೂ.ಮೌಲ್ಯದ ಕಿಟ್‌ಮೆಟೀರಿಯಲ್ಸ್.

ಇ. ಗುಂಪಿನ ಸದಸ್ಯರುಗಳಿಗೆ ಸಾಮರ್ಥ್ಯ ವರ್ಧನೆ, ಲೆಕ್ಕಪತ್ರ ನಿರ್ವಹಣೆ, ಆದಾಯೋತ್ಪನ್ನ ಚಟುವಟಿಕೆ ಹಾಗೂ ಸಾಮಾಜಿಕ ಪಿಡುಗುಗಳು ಈ ವಿಷಯಗಳಲ್ಲಿ ತರಬೇತಿ.

ಈ. ಆರ್ಥಿಕ ಚಟುವಟಿಕೆಗಳನ್ನು ಹಮ್ಮಿಕೊಳ್ಳಲು ಬ್ಯಾಂಕ್‌ಗಳಿಂದ ಗುಂಪುಗಳಿಗೆ ಸಾಲ ನೀಡಲು ಸಹಾಯ ನೀಡುತ್ತಿದೆ.

ಉ. ವಿವಿಧ ಇಲಾಖೆಗೆ ಸವಲತ್ತುಗಳನ್ನು ಒಮ್ಮುಖಗೊಳಿಸಿ ಗುಂಪಿನ ಸದಸ್ಯರುಗಳಿಗೆ ಸೇವೆಗಳು/ಸೌಲಭ್ಯಗಳು ದೊರಕುವಂತೆ ಮಾಡುವುದು.

ಇ) ಅ) 2000-01ರ ಸಾಲಿನಲ್ಲಿ ರಚನೆಯಾದ ಪ್ರತಿ ಗುಂಪಿನಿಂದ ಇಬ್ಬರು ಪ್ರತಿನಿಧಿಗಳನ್ನು ಆಯ್ಕೆ ಮಾಡಿ ಇವರಿಗೆ ಗ್ರಾಮೀಣ ಮಟ್ಟದಲ್ಲಿ ಸ್ವಸಹಾಯ ಗುಂಪಿನ ಪರಿಕಲ್ಪನೆ ಹಾಗೂ ಲೆಕ್ಕಪತ್ರ ನಿರ್ವಹಣೆಯಲ್ಲಿ ಒಟ್ಟು 1,10,446 ಪ್ರತಿನಿಧಿಗಳಿಗೆ 2 ದಿವಸಗಳ ಓರಿಯಂಟೇಶನ್ ತರಬೇತಿ ನೀಡಲಾಗಿದೆ.

ಆ) 2001-02ರ ಸಾಲಿನಲ್ಲಿ 11,13,056 ಗುಂಪಿನ ಸದ್ಯರುಗಳಿಗೆ ಸಾಮರ್ಥ್ಯ ವರ್ಧನೆಯ ಬಗ್ಗೆ ಅಂಗನವಾಡಿಕಾರ್ಯಕರ್ತೆಯರು ತರಬೇತಿ ನೀಡಿರುತ್ತಾರೆ. ಈತರಬೇತಿ ಕಾರ್ಯಕ್ರಮದಲ್ಲಿ ಲಿಂಗತ, ಸಂಪರ್ಕ, ಲೆಕ್ಕ ಪತ್ರ ನಿರ್ವಹಣೆ, ಮುಂದಾಳತ್ವ, ಈವಿಷಯದ ಬಗ್ಗೆ ತರಬೇತಿ ನೀಡಲಾಗಿದೆ.